ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 7ನೇ ಸಂಚಿಕೆ ಕೊಪ್ಪ 11-10-1987 ಭಾನುವಾರ ಬೆಲೆ 50 ಪೈಸೆ

ಶಂಕರ್ ಕಂಪೆನಿಯೆದುರು ಅ. 11ರಿಂದ ನಡೆಸಲುದ್ದೇಶಿಸಿದ್ದ

ಕಾರ್ಮಿಕ ಮುಖಂಡನ ನಿರಶನ ಮುಂದೂಡಿಕೆ

ಕೊಪ್ಪ: ಶಂಕರ್ ಕಾರ್ಮಿಕರ ಮುಷ್ಕರದ ನಂತರ ಆಗಸ್ಟ್ ಆರಂಭದಲ್ಲೇ ಒಪ್ಪಂದವಾಗಿ ಒಂದು ತಿಂಗಳೊಳಗಾಗಿ ಬೇಡಿಕೆ ಪತ್ರದ ಬಗ್ಗೆ ಚರ್ಚಿಸಲು ಒಪ್ಪಲಾಗಿದ್ದರೂ ಈವರೆಗೂ ಚರ್ಚೆಗೆ ಅವಕಾಶ ನೀಡಿರಲಿಲ್ಲ. (ಮೊದಲಿಗೆ ಒಂದೆರಡು ಬಾರಿ ಕಾರ್ಮಿಕ ಮುಖಂಡರೇ ಬೇರೆ ಕಡೆಯ ಸಮಸ್ಯೆಗಳಿಂದಾಗಿ ಭಾಗವಹಿಸಿರಲಿಲ್ಲ.) ಜೊತೆಗೆ 'ಯೂನಿಯನ್ ಮುರಿವ ಯತ್ನ', ಕಾರ್ಮಿಕರಿಗೆ ಸಣ್ಣ ಕಿರುಕುಳಗಳು ಯಥಾ ಪ್ರಕಾರ ಬಿರುಸಾಗಿ ಆರಂಭಗೊಂಡಿದ್ದವು.

ಇದನ್ನೆಲ್ಲ ಪ್ರತಿಭಟಿಸಿ ಹಾಗೂ ಕೂಡಲೇ ಬೇಡಿಕೆ ಪತ್ರದ ಬಗ್ಗೆ ಚರ್ಚೆಗೆ ಒತ್ತಾಯಿಸಿ, ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ಎಂ. ರೇಣುಕಾರಾಧ್ಯ ಅ. 11ರಿಂದ ಕಂಪೆನಿ ಎದುರು ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ ನಡೆಸಲು ಉದ್ದೇಶಿಸಿದ್ದರು.

ಆದರೆ ಕಂಪೆನಿ ಅ. 9ರಂದು ಸಂಘಕ್ಕೆ ಪತ್ರ ಬರೆದು ಅಕ್ಟೋಬರ್ ಕೊನೆಯೊಳಗೆ ಚರ್ಚೆ ಆರಂಭಿಸುವುದಾಗಿಯೂ, ನವೆಂಬರ್ ಮೊದಲ ಅಥವಾ ಎರಡನೇ ವಾರದೊಳಗೆ ಒಂದು ಒಪ್ಪಂದಕ್ಕೆ ಬರುವುದಾಗಿಯೂ ಲಿಖಿತ ಭರವಸೆ ಕೊಟ್ಟ ಮೇರೆಗೆ ನಿರಶನವನ್ನು ಮುಂದೂಡಿರುವುದಾಗಿ ಆರಾಧ್ಯ ತಿಳಿಸಿದ್ದಾರೆ.

ಬಾಕಿ ವೇತನ ಪಾವತಿ

ಸೆ. 3ರಂದು ಆದ ಒಪ್ಪಂದದ ಪ್ರಕಾರ ಖಾಯಂಗೊಳಿಸಲ್ಪಟ್ಟ 26 ಜನ ಕಾರ್ಮಿಕರಿಗೆ ಬರಬೇಕಾಗಿದ್ದ ಸುಮಾರು 19 ಸಾವಿರ ರೂ. ಬಾಕಿ ವೇತನವನ್ನು ಇದೀಗ ಪಾವತಿಸಲಾಗಿದ್ದು. ಪ್ರತಿಯೊಬ್ಬ ಕಾರ್ಮಿಕರಿಗೂ ಅವರವರ ಸೇವಾವಧಿಯನ್ನನುಸರಿಸಿ ಕನಿಷ್ಠ 280 ರೂ.ನಿಂದ 1460 ರೂ. ವರೆಗೂ ದೊರಕಿರುವುದಾಗಿಯೂ ಆರಾಧ್ಯ ತಿಳಿಸಿದ್ದಾರೆ.

ಅಂತರ್ಜಾತಿ ವಿವಾಹಿತರಿಗೆ ರಕ್ಷಣೆ, ಸೌಲಭ್ಯಕ್ಕೆ ಆಗ್ರಹ

ಶೃಂಗೇರಿ : ಅಂತರ್ಜಾತಿ ವಿವಾಹಿತರಿಗೆ ಉದ್ಯೋಗಗಳಲ್ಲಿ ಶೇ. 5ರಷ್ಟು ಮೀಸಲಾತಿ ಕೊಡಬೇಕು, ಸೂಕ್ತ ರಕ್ಷಣೆ ಮತ್ತು ಭದ್ರತೆಗಳನ್ನು ಒದಗಿಸಬೇಕು ಮತ್ತು ಅವರ ಮಕ್ಕಳಿಗೆ ಒಂದು ತಲೆಮಾರಿನವರೆಗೆ ಶಿಕ್ಷಣದಲ್ಲಿ ಸೌಲಭ್ಯ ಕಲ್ಪಿಸಬೇಕು ಎಂದು ಇಲ್ಲಿ ಅ. 4ರಂದು ನಡೆದ ಅಂತರಜಾತಿ ವಿವಾಹಿತರ ಸಮಾವೇಶ ಸರ್ಕಾರವನ್ನು ಒತ್ತಾಯಿಸಿದೆ.

ರಾಜ್ಯದಲ್ಲಿಯೇ ಅಪೂರ್ವವಾದುದೆನ್ನಲಾದ ಈ ಸಮಾವೇಶ ಅಂತರ್ಜಾತಿ ವಿವಾಹಿತರು ಎದುರಿಸುತ್ತಿರುವ ಸಮಸ್ಯೆಗಳನ್ನೂ ಅವುಗಳಿಗೆ ಪರಿಹಾರೋಪಾಯಗಳನ್ನೂ ಕುರಿತು ಚರ್ಚಿಸಿತಲ್ಲದೆ, ಜಾತಿ ಪದ್ಧತಿಯನ್ನು ತೊಡೆಯುವಲ್ಲಿ ಒಂದು ಪರಿಣಾಮಕಾರಿ ಸಾಧನವಾದ ಅಂತರ್ಜಾತಿ ವಿವಾಹಗಳನ್ನು ಹೆಚ್ಚು ಜನಪ್ರಿಯ ಮತ್ತು ವ್ಯಾಪಕಗೊಳಿಸುವ ಬಗ್ಗೆಯೂ ಚರ್ಚಿಸಿತು.

ನಾಡಿನ ಹಿರಿಯ ಪತ್ರಕರ್ತರಲ್ಲೊಬ್ಬರಾದ 'ಮುಂಗಾರು' ದಿನ ಪತ್ರಿಕೆ ಸಂಪಾದಕ ವಡ್ಡರ್ಸೆ ರಘುರಾಮ ಶೆಟ್ಟರು ಅಧ್ಯಕ್ಷತೆ ವಹಿಸಿದ್ದ ಈ ಸಮಾವೇಶವನ್ನು ಖ್ಯಾತ ಬರಹಗಾರರಾದ ಪೂರ್ಣಚಂದ್ರ ತೇಜಸ್ವಿಯವರು ಉದ್ಘಾಟಿಸಿದರು. ಖ್ಯಾತ ಸಮಾಜವಾದಿ ಚಿಂತಕ ಕೆ. ರಾಮದಾಸ್, ಕೊಪ್ಪದ ವೈದ್ಯಾಧಿಕಾರಿ ಡಾ॥ ಎಂ ಜಿ ಪ್ರಸಾದ್, 'ಪ್ರಜಾವಾಣಿ' ವರದಿಗಾರ ಸಂಚೇತನ ಸ್ವರೂಪ್ ಮತ್ತು ನ. ರಾ. ಪುರದ ವಕೀಲರಾದ ಶ್ರೀಮತಿ ಶಶಿಕಲಾ ಅವರುಗಳು ವಿವಿಧ ವಿಷಯಗಳ ಮೇಲೆ ವಿಚಾರ ಮಂಡನೆ ಮಾಡಿದರು.

ಸುತ್ತಮುತ್ತಲ ಪ್ರದೇಶಗಳವರೂ ಸೇರಿದಂತೆ ಅರ್ಧ ಕರ್ನಾಟಕದ ಎಲ್ಲೆಡೆಗಳಿಂದ ಬಂದಿದ್ದ ಸುಮಾರು 400ಕ್ಕೂ ಹೆಚ್ಚು ಪ್ರತಿನಿಧಿಗಳು ಇಡೀ ದಿನದ ಕಾರ್ಯಕ್ರಮದಲ್ಲಿ ಅತ್ಯಂತ ಆಸಕ್ತಿಯಿಂದ ಭಾಗವಹಿಸಿದರು. ಮಂಡಿಸಿದ ವಿಷಯಗಳ ಮೇಲೆ ಚರ್ಚೆ ನಡೆದು, ಅನಂತರ ಜಿಲ್ಲಾ ವಿಚಾರವಾದಿ ವೇದಿಕೆಯ ಪರವಾಗಿ ಎಂ. ಡಿ. ಗಂಗಯ್ಯ ಅವರು ಮಂಡಿಸಿದ ನಿರ್ಣಯಗಳನ್ನು ಸಭೆ ಅನುಮೋದಿಸಿತು.

ಜಿಲ್ಲಾ ವಿಚಾರವಾದಿ ವೇದಿಕೆಯ ಆಶ್ರಯದಲ್ಲಿ ಈ ಸಮಾವೇಶ ನಡೆಯಿತು. ಇಲ್ಲಿ ಮಂಡಿಸಲಾದ ನಿರ್ಣಯಗಳನ್ನು ಕಾರ್ಯಗತ ಮಾಡುವಂತೆ ಸರ್ಕಾರಗಳೊಂದಿಗೆ ಹಾಗೂ ಮುಂದೆ ರಚಿತವಾಗಬಹುದಾದ ಆಯೋಗಗಳೊಂದಿಗೆ ವ್ಯವಹರಿಸಿ ಒತ್ತಾಯ ತರಲು ಖಾಯಂ ವೇದಿಕೆಯೊಂದನ್ನು ರಾಜ್ಯ ಮಟ್ಟದಲ್ಲಿ ರೂಪಿಸಲು ವಿಚಾರವಾದಿ ವೇದಿಕೆ ಉದ್ದೇಶಿಸಿದೆ.

(ಚರ್ಚೆಯ ಮುಖ್ಯಾಂಶ 2ನೇ ಪುಟದಲ್ಲಿ.)

ಬಸರಿಕಟ್ಟೆ - ಆಗುಂಬೆ ಬಸ್ ಪುನರಾರಂಭಿಸಲು ಮನವಿ

ಬಸರಿಕಟ್ಟೆ: ಇಲ್ಲಿಂದ ಬೆಳಿಗ್ಗೆ 6.15ಕ್ಕೆ ಹೊರಟು ಜಯಪುರ, ಶೃಂಗೇರಿ ಮಾರ್ಗವಾಗಿ ಆಗುಂಬೆಗೂ ಅಲ್ಲಿಂದ ಸಂಜೆ ಪುನಃ ಬಸರಿಕಟ್ಟೆಗೂ ಓಡಾಡುತ್ತಿದ್ದ ಶಂಕರ್ ಕಂಪೆನಿ ಬಸ್ಸನ್ನು ಇತ್ತೀಚೆಗೆ ನಿಲ್ಲಿಸಲಾಗಿದ್ದು, ಈ ಭಾಗದಲ್ಲಿ ಆ ಅವಧಿಯಲ್ಲಿ (ಬೆಳಿಗ್ಗೆ 5.30–7.30ರ ನಡುವೆ) ಬೇರೆ ಬಸ್ ಇಲ್ಲದಿರುವುದರಿಂದ ಅದನ್ನು ಪುನರಾರಂಭಿಸುವಂತೆ ಅತ್ತಿಕೊಡಿಗೆ ಮಂಡಲ ವ್ಯಾಪ್ತಿಯ ಗ್ರಾಮಸ್ಥರು ಕಂಪೆನಿಗೆ ಮನವಿ ಪತ್ರವೊಂದನ್ನು ಸಲ್ಲಿಸಿದ್ದಾರೆ.

ಕೊಪ್ಪ ಜೀವವಿಮಾ ಶಾಖೆ ಕಛೇರಿ ಕಾರ್ಯಾರಂಭ

ಕೊಪ್ಪ : ಜಿಲ್ಲಾಧಿಕಾರಿ ಶ್ರೀಮತಿ ಅನಿತಾಕೌಲ್‌ರವರು ಇಲ್ಲಿನ ನೂತನ ಜೀವ ವಿಮಾ ಶಾಖೆಯನ್ನು ಅ. 8ರಂದು ಉದ್ಘಾಟಿಸಿ, ಇದರಿಂದ ಜೀವ ವಿಮೆಯ ಸಂದೇಶ ಈ ಭಾಗದ ಹಳ್ಳಿಹಳ್ಳಿಗೂ ಮುಟ್ಟುವಂತಾಗಿದೆ ಎಂದರು

ಜೀವವಿಮೆ ಬಡ ಕುಟುಂಬಗಳಿಗೆ ಅತಿ ಅವಶ್ಯವಾದ ನೆರವು ಮತ್ತು ಪರಿಹಾರಗಳನ್ನೊದಗಿಸುತ್ತದೆ. ಜೊತೆಗೇ, ಇದಕ್ಕೆ ಪ್ರೀಮಿಯಂ ರೂಪದಲ್ಲಿ ಜನರು ಕೊಡುವ ಹಣವನ್ನು ಪುನಃ ತೊಡಗಿಸುವುದರಿಂದ ದೇಶದ ಉತ್ಪಾದನೆ ಅಧಿಕವಾಗುತ್ತಿದೆ ಎಂದ ಅವರು, ನೂತನ ಶಾಖೆ ಜನತೆಗೆ ಉತ್ತಮ ಸೇವೆ ಒದಗಿಸಲೆಂದು ಆಶಿಸಿದರು.

ಉಡುಪಿ ವಿಭಾಗದ ಪಾಲಿಸಿದಾರರ ಕೌನ್ಸಿಲ್ಲಿನ ಸದಸ್ಯರಾದ ಶಂಕರ್ ಸಾರಿಗೆ ಸಂಸ್ಥೆಯ ಎ. ರಮೇಶರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಹಿರಿಯ ವಿಭಾಗಾಧಿಕಾರಿ ಎನ್. ಕೆ. ವೇಣುಗೋಪಾಲ್ ಕೊಪ್ಪ ಶಾಖೆ ಆರಂಭಿಸಲು ಬಹಳ ವರ್ಷಗಳಿಂದ ನಡೆದ ಯತ್ನ ಇಂದು ಕೈಗೂಡಿದೆ ಎಂದರು.

ಮಂಜುನಾಥ ಶೆಟ್ಟಿ, ಎಂ. ಡಿ. ಬಾಲಕೃಷ್ಣ, ಪಿ ಜಿ. ಗುರ್ಜರ್, ಕೆ.ವಿ. ರಾಮಪ್ಪಯ್ಯ, ಧರ್ಮಯ್ಯ ಗೌಡ, ಕೋದಂಡ ರಾಮಭಟ್ ಮುಂತಾದವರು ಮಾತನಾಡಿ, ಹೊಸ ಶಾಖೆಗೆ ಶುಭ ಹಾರೈಸಿದರು.

ಕಳೆದ ಏಪ್ರಿಲ್‌ನಿಂದೀಚೆಗೆ 5 ಲಕ್ಷಕ್ಕೂ ಹೆಚ್ಚು ವ್ಯವಹಾರ ಮಾಡಿದ ಕಟ್ಟಿನಮನೆ ಅನಂತಮೂರ್ತಿ (11.09 ಲಕ್ಷ), ಎಸ್. ಜಿ. ಕೃಷ್ಣಮೂರ್ತಿ (10 ಲಕ್ಷ), ಗಿರಿಜಾ ಎಚ್. ಡಿ. ನಾಯಕ್ (8.11 ಲಕ್ಷ), ಜೆ. ಆರ್. ಕೆ. ರಾಮಭಟ್ (8 ಲಕ್ಷ), ಮುಂತಾದ ಏಜೆಂಟರಿಗೆ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಆರಂಭದಲ್ಲಿ ಸುಶ್ರಾವ್ಯವಾಗಿ ಪ್ರಾರ್ಥನೆ ಮಾಡಿದ ಕು॥ ಸಂಧ್ಯಾಗೂ ನೆನಪಿನ ಕಾಣಿಕೆ ನೀಡಲಾಯಿತು.

ರಮೇಶರಾವ್ ಮಾತನಾಡಿ, ತಾನು ಪಾಲಿಸಿದಾರರ ಕೌನ್ಸಿಲ್ ಸದಸ್ಯನಾಗಿರುವ ಅವಧಿಯಲ್ಲೇ ಈ ಶಾಖೆ ಆರಂಭವಾಗುತ್ತಿರುವುದು ತನಗೆ ಹೆಮ್ಮೆ ತಂದಿದೆ ಎಂದರು. ನೂತನ ಶಾಖೆಯ ಮ್ಯಾನೇಜರ್

(4ನೇ ಪುಟಕ್ಕೆ)

'ಮುಂಜಾವು' ಹಿಡಿದ ಖೋಟಾ ಇಂಜಿನಿಯರ್ !

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ತಾನು ಸಣ್ಣ ನೀರಾವರಿಯ ಇಂಜಿನಿಯರ್ ಎಂದು ಹೇಳಿಕೊಂಡು ಹುಲಿಗರಡಿ ಗ್ರಾಮದ ಬಡ ಗಿರಿಜನ ರೈತರಿಂದ ಹಣ ಕೀಳಲು ಯತ್ನಿಸಿ, ನಮ್ಮ ಪತ್ರಿಕೆಯ 20-9-87ರ ಸಂಚಿಕೆಯ 'ಖೋಟಾ ಇಂಜಿನಿಯರ್?' ಎಂಬ ವರದಿಯಲ್ಲಿ ಬೆಳಕು ಕಂಡ ವ್ಯಕ್ತಿ, ತನ್ನ ಬಣ್ಣ ಹೀಗೆ ಬಯಲಾದುದರ ಅರಿವಿಲ್ಲದೆ ಬೇಗಾರು, ಬಿದರಗೋಡು ಸುತ್ತಮುತ್ತ ಅದೇ 'ಧಂಧೆ'ಯಲ್ಲಿ ತೊಡಗಿದ್ದಾಗ ಸಿಕ್ಕಿ ಬಿದ್ದು, ಇದೀಗ ಶಿವಮೊಗ್ಗದ ಜೈಲಿನಲ್ಲಿದ್ದಾನೆಂದು ತಿಳಿದು ಬಂದಿದೆ.

ಹುಲಿಗರಡಿಯಲ್ಲಿ ಹೇಳಿದಂತೆಯೇ ಇಲ್ಲೂ ಕೂಡ ತನ್ನ ಹೆಸರನ್ನು ರಾಮೇಗೌಡ ಎಂದು ಹೇಳಿಕೊಂಡು, ಬಡ ಮುಗ್ಧ ರೈತಾಪಿ ಜನರಿಂದ 'ರಿಜಿಸ್ಟ್ರೇಶನ್ ಫೀ' ಎಂಬುದಾಗಿ ತಲಾ 25 ರೂ.ಗಳಂತೆ ಹಲವರಿಂದ ಕಿತ್ತಿದ್ದನೆನ್ನಲಾಗಿದೆ. ಅಷ್ಟರಲ್ಲಿ ಬಿದರಗೋಡಿನ ಬಿ. ಎನ್. ರಂಗಪ್ಪಯ್ಯ ಎಂಬ ಚಂದಾದಾರರು ಪತ್ರಿಕೆಯಲ್ಲಿನ ವರದಿ ನೋಡಿ ಕೆಲವರಿಗೆ ತಾಕೀತು ಮಾಡಿದಾಗ ಶಂಕರಪ್ಪ ಎಂಬ ಯುವಕ ಮತ್ತು ಇತರರು ಕೂಡಿ ಆತನನ್ನು ತಪಾಸಿಸಿದರೆನ್ನಲಾಗಿದೆ.

ಆಗ ತನ್ನ ಹೆಸರು ಮುನಿಯಪ್ಪ ಎಂದು ಹೇಳಿದ ಈತನನ್ನು ಅವರೆಲ್ಲ ಸೇರಿ ಶೃಂಗೇರಿ ಪೋಲೀಸ್ ಠಾಣೆಗೆ ತಂದೊಪ್ಪಿಸಿದಾಗ ಅವರು ಹರಿಹರಪುರ ಠಾಣೆಗೆ ರವಾನಿಸಿ, ಅಲ್ಲಿಂದ ನ. ರಾ. ಪುರ ನ್ಯಾಯಾಲಯಕ್ಕೆ ಹಾಜರ್ಪಡಿಸಿದಾಗ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಯಿತೆಂದು ತಿಳಿದು ಬಂದಿದೆ.

ಆತ ಹುಲಿಗರಡಿ ಗ್ರಾಮದಲ್ಲಿ ಮಾತ್ರವಲ್ಲದೆ ಕೊಗ್ರೆ, ಗುಡ್ಡೆತೋಟ ಮುಂತಾದ ಕಡೆಗಳಲ್ಲಿ ಸಹ ಈಗಾಗಲೇ ಹೀಗೆ ಹಣ ಕಿತ್ತಿದ್ದಾನೆನ್ನಲಾಗಿದೆ. ಈ ಎಲ್ಲ ಭಾಗಗಳ ಜನತೆ ಆ ಒಂದು ವರದಿಗಾಗಿ ಪತ್ರಿಕೆಯನ್ನು ಹೃದಯತುಂಬಿ ಅಭಿನಂದಿಸಿದ್ದಾರೆ.

ಜಾತಿವ್ಯವಸ್ಥೆ, ಅಂತರ್ಜಾತಿ ವಿವಾಹ: ಚರ್ಚೆಯ ಕೆಲ ಮುಖ್ಯಾಂಶಗಳು

ಸಮಾವೇಶದಲ್ಲಿ ಮಂಡಿಸಲಾದ ವಿಚಾರಗಳು ಮತ್ತು ಆ ಕುರಿತ ಚರ್ಚೆಯ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದೆ. ಭಾಷಣಗಳ ಪೂರ್ಣಪಾಠವನ್ನೊಳಗೊಂಡ ಕಿರು ಪುಸ್ತಿಕೆಯೊಂದನ್ನು ಹೊರ ತರುವ ಯೋಜನೆ ಸಮಾವೇಶದ ಸ್ವಾಗತ ಸಮಿತಿಗೆ ಇದೆ.

ಸಮಾವೇಶದ ಗೊತ್ತುಗುರಿಗಳ ಬಗ್ಗೆ ಪ್ರಾಸ್ತಾವಿಕ ಭಾಷಣ ಮಾಡಿದ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು, ಜಾತಿ ವ್ಯವಸ್ಥೆ ಹೇಗೆ ಇಡೀ ದೇಶದ ಕ್ರಿಯಾ ಶೀಲತೆಯನ್ನು ನಾಶ ಮಾಡಿದೆ ಎಂಬುದನ್ನು ವಿವರವಾಗಿ ವಿಮರ್ಶಿಸಿದರು.

ವರ್ಗ ವಿಭಜನೆ ಅಥವಾ ಶ್ರೇಣೀಕೃತ ವ್ಯವಸ್ಥೆ–ಅಂದರೆ ಮೇಲು ಕೀಳಿನ ಪರಿಗಣನೆ– ಪ್ರಪಂಚದ ಎಲ್ಲಾ ದೇಶಗಳಲ್ಲೂ, ಎಲ್ಲಾ ಕಾಲಗಳಲ್ಲೂ ಇದ್ದುದೇ. ಆದರೆ ವ್ಯಕ್ತಿಗತ ಸಾಮರ್ಥ್ಯ, ಯೋಗ್ಯತೆ, ಸಾಧನೆಗಳು ಅಲ್ಲಿ ಒಬ್ಬ ಮನುಷ್ಯನ ಅಂತಸ್ತನ್ನು ನಿರ್ಧರಿಸುತ್ತವೆ. ಹೀಗಾಗಿ ಪ್ರತಿಯೊಬ್ಬ ಮನುಷ್ಯನೂ ಹೆಚ್ಚೆಚ್ಚು ಸಾಧನೆ ಗೈಯಲು ಪೈಪೋಟಿಯಿಂದ ಶ್ರಮಿಸುತ್ತಾನೆ. ಈ ಸ್ಪರ್ಧಾ ಮನೋಭಾವವೇ ಅವರಿಗೆ ಹೆಚ್ಚೆಚ್ಚು ಉನ್ನತಿಗೇರಲು ತಕ್ಕ ಉತ್ತೇಜನವನ್ನೊದಗಿಸುತ್ತದೆ.

ಇಂಥ ಯೋಗ್ಯತೆಯನ್ನಾಧರಿಸಿದ ಅಂತಸ್ತಿನ ವ್ಯವಸ್ಥೆಯಲ್ಲಿ ಇಡೀ ಸಮಾಜಕ್ಕೆ– ಇಡೀ ದೇಶಕ್ಕೆ ಉಪಯುಕ್ತವಾಗುವಂತಹ ಸಾಧನೆಯಲ್ಲಿ ಯಶಸ್ಸು ಗಳಿಸಿದವರ ಸ್ಥಾನ–ಮಾನ ಅತ್ಯಂತ ಮೇಲಿನದಾಗಿರುತ್ತದೆ.

ಆದರೆ ಇಂಥ ಶ್ರೇಣೀಕೃತ ವ್ಯವಸ್ಥೆಯ ಮುಖ್ಯ ಲಕ್ಷಣ ಚಲನಶೀಲತೆ. ಅಂದರೆ ಪ್ರತಿಯೊಬ್ಬನೂ ತನ್ನ ಸಾಮರ್ಥ್ಯದಿಂದ ಮೇಲಿನವನೆನ್ನಿಸಿಕೊಳ್ಳುತ್ತಾನೆ ಹೊರತು ಹುಟ್ಟಿನಿಂದಲ್ಲ. ಹಾಗೆಯೇ ಕೆಳ ವರ್ಗದಲ್ಲಿ ಹುಟ್ಟಿದರೂ ಪರಿಶ್ರಮದಿಂದ ಸಾಧನೆ ಮಾಡಿದವ ಉನ್ನತಿಯ ಅವಕಾಶಗಳಿಂದ ವಂಚಿತನಾಗುವುದಿಲ್ಲ.

ಈ ಚಲನಶೀಲತೆ, ಈ ರೀತಿಯ ಮುಕ್ತ ಮತ್ತು ಸ್ಪರ್ಧಾತ್ಮಕ ಅವಕಾಶದಿಂದಾಗಿಯೇ ಅಲ್ಲಿ ಉನ್ನತಿಗೇರಬಯಸುವ ಪ್ರತಿಯೊಬ್ಬನೂ ಇಡೀ ಸಮಾಜ ಅಥವಾ ದೇಶದ ಮಟ್ಟದಲ್ಲೇ ಚಿಂತಿಸುವುದರಿಂದ ಇಡೀ ದೇಶ ದೊಡ್ಡ ದೊಡ್ಡ ಹೆಜ್ಜೆಗಳಿಂದ ಮುಂದುವರಿಯುತ್ತ ಹೋಗುತ್ತದೆ.

ಆದರೆ ನಮ್ಮ ಸಮಾಜದೊಳಗಿರುವ ಶ್ರೇಣೀಕೃತ ವ್ಯವಸ್ಥೆ ಇಂಥ ಚಲನಶೀಲತೆಯನ್ನು ಕಳೆದುಕೊಂಡು ಬರೀ 'ಜಾತಿ' ವ್ಯವಸ್ಥೆಯಾಗಿದೆ. ಇಲ್ಲಿ ಉನ್ನತಿಗೆ ಮುಕ್ತ ಅವಕಾಶವಿಲ್ಲ, ಸಾಧನೆಗೆ ಬೆಲೆಯಿಲ್ಲ. ಮೇಲು ಅಥವಾ ಕೀಳು ಶಾಶ್ವತವಾಗಿ ಹುಟ್ಟಿನಿಂದಲೇ ನಿರ್ಧರಿತವಾಗುತ್ತದೆ. ಮೇಲು ಜಾತಿಯಲ್ಲಿ ಹುಟ್ಟಿದವ ಯಾವ ಯೋಗ್ಯತೆಯ, ಸಾಧನೆಯ ಅಗತ್ಯವೂ ಇಲ್ಲದೆ ಮೇಲೆನ್ನಿಸಿಕೊಳ್ಳಬಲ್ಲ. ಹಾಗೆಯೇ, ಕೆಳಜಾತಿಯಲ್ಲಿ ಹುಟ್ಟಿದವನೊಬ್ಬ ಎಷ್ಟೇ ಸಾಮರ್ಥ್ಯ ಪ್ರದರ್ಶಿಸಿದರೂ ಆತ ಮೇಲೆನ್ನಿಸಿಕೊಳ್ಳಲಾರ.

ಹೀಗಾಗಿ ಇಲ್ಲಿ ವ್ಯಕ್ತಿಯ, ಆ ಮೂಲಕ ಇಡೀ ಸಮಾಜದ ಕ್ರಿಯಾಶೀಲತೆ ಸತ್ತು ಹೋಗಿದೆ. ಇಂಥ ನಿಷ್ಕ್ರಿಯ ವಾತಾವರಣದಲ್ಲಿ ದೇಶ ಅಭಿವೃದ್ಧಿ ಹೊಂದುವುದು ಸಾಧ್ಯವೇ ಇಲ್ಲ–ಎಂದು ತೇಜಸ್ವಿ ತಮ್ಮ ಗಹನವಾದ ಚಿಂತನೆಯ ವಿಚಾರಗಳನ್ನು ಮುಂದಿಟ್ಟರು.

ಈ ಜಡತ್ವವನ್ನು ತೊಡೆದು, ಸಮಾಜದಲ್ಲಿ ಚಲನೆಯನ್ನು ಉಂಟುಮಾಡುವುದರ ಬಗೆಗೆ ಕೂಡ ಆಲೋಚಿಸಿದ ಅವರು ಮೀಸಲಾತಿಯ ಮೂಲಕ 'ಜಾತ್ಯತೀತತೆ'ಯನ್ನು ಬೆಳೆಸುವ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದರು.

ನಮ್ಮ ದೇಶದಲ್ಲಿ ಈಗಿರುವ ಮೀಸಲಾತಿಯ ನೀತಿಯಿಂದಾಗಿ ತಲೆ ತಲಾಂತರದಿಂದ ಹಿಂದುಳಿದಿರುವ ಜಾತಿಗಳು ಮುಂದುವರಿಯುತ್ತವೆ, ಹೀಗೆ ಮುಂದುವರಿಯುತ್ತ ಬೇರೆ ಬೇರೆ ಜಾತಿಗಳು ಪರಸ್ಪರ ಸಮಾನತೆ ಸಾಧಿಸುತ್ತವೆ ಎಂಬುದರಲ್ಲಿ ಏನೂ ಅನುಮಾನವಿಲ್ಲ. ಆದರೆ ಅದು **ಜಾತಿ ಸಮಾನತೆಗೆ** ಅವಕಾಶ ಕೊಡುತ್ತದೆಯೇ ಹೊರತು **ಜಾತ್ಯತೀತತೆಗೆ** ಅಲ್ಲ. ಇದರಿಂದ ಜಾತಿಗಳ ಕಟ್ಟು ಇನ್ನಷ್ಟು ಬಲವಾಗುತ್ತದೆ. ಮೀಸಲಾತಿಯ ಪ್ರಯೋಜನ ಪಡೆಯುವುದಕ್ಕಾಗಿ ಇನ್ನಷ್ಟು ಹೊಸ ಹೊಸ ಜಾತಿಗಳು ಹುಟ್ಟುತ್ತವೆ, ಮತ್ತಷ್ಟು ಜಾತಿಗಳು ಹಿಂದುಳಿದವುಗಳೆಂದು ಕರೆದುಕೊಳ್ಳುತ್ತವೆ

ಆದರೆ ಈ ದೇಶಕ್ಕೆ ಬೇಕಾಗಿರುವುದು ಜಾತ್ಯತೀತತೆಯೇ ಹೊರತು ಜಾತಿಗಳ ಕನ್ಸಲಿಡೇಶನ್ (ಬಲಿಷ್ಠಗೊಳಿಸುವಿಕೆ) ಅಲ್ಲ. **ಅದಕ್ಕಾಗಿ ಜಾತ್ಯತೀತತೆಗೇ ಮೀಸಲಾತಿ ಕೊಡಬೇಕು.** ಅಂದರೆ, ಅಂತರ್ಜಾತಿ ವಿವಾಹಿತರಾಗಿ, ಯಾವ ಜಾತಿಗೂ ಸೇರದೆ ಸ್ವತಂತ್ರರಾಗಿ ಉಳಿಯುವವರನ್ನು ಜಾತ್ಯತೀತರೆಂದು ಪರಿಗಣಿಸಿ, ಅವರಿಗೆ, ಅವರ ಮಕ್ಕಳಿಗೆ ಉದ್ಯೋಗ ಮತ್ತು ಶೈಕ್ಷಣಿಕ ಅವಕಾಶಗಳಲ್ಲಿ ಮೀಸಲಾತಿ ದೊರಕಿಸಬೇಕು.

ಕ್ರಮೇಣ, ಈವರೆಗೆ ಮೀಸಲಾತಿ ಅನುಭವಿಸುತ್ತಿರುವ ಒಂದೊಂದೇ ಜಾತಿ ಮುಂದುವರಿದು ತನ್ನ ಆ ಸೌಲಭ್ಯವನ್ನು ಬಿಟ್ಟು ಕೊಡುವಂತಾದ ಹಾಗೆ, ಆ ಕೋಟಾವನ್ನು ಜಾತ್ಯತೀತರ ಕೋಟಾಕ್ಕೆ ಸೇರಿಸುತ್ತ ಹೋಗಬೇಕು. ಹೀಗೆ, ಕೆಲ ಕಾಲದ ನಂತರ ಮೀಸಲಾತಿಯ ಪೂರ್ಣ ಕೋಟಾ ಈ ಜಾತ್ಯತೀತರಿಗೇ ದೊರೆಯುವಂತಾಗುತ್ತದೆ.

ಇದಕ್ಕೆ ಮೊದಲ ಹೆಜ್ಜೆಯಾಗಿ, ಅಂತರ ಜಾತಿ ವಿವಾಹಿತರಿಗೆ ಮೀಸಲಾತಿಯನ್ನು, ಕೇವಲ ಶೇ. 2ರಿಂದ 5ರಷ್ಟು ಮಾತ್ರ ಕೊಟ್ಟರೂ ಸಾಕು, ಅದು ಈ ಜಾತಿ ವ್ಯವಸ್ಥೆಯ ಮೇಲೆ ಎಂಥ ಅದ್ಭುತವಾದ ಪರಿಣಾಮ ಮಾಡುತ್ತದೆಂಬುದನ್ನು ನೋಡಿ– ಎಂದು ತೇಜಸ್ವಿ ತಮ್ಮ ಈ ದೂರಗಾಮಿ ಕಲ್ಪನೆಯನ್ನು ಸಮಾಜದ ಮುಂದಿಡುವ ಯತ್ನ ಮಾಡಿದರು.

ಈ ದೇಶದಲ್ಲಿ ಜಾತಿ ವ್ಯವಸ್ಥೆಯೇ ಧರ್ಮದ ಪ್ರತಿರೂಪವೆಂಬ ನಂಬಿಕೆಯನ್ನು ಜನಸಾಮಾನ್ಯರಲ್ಲಿ ಬೇರೂರಿಸುವ ಜೊತೆಗೆ ಕರ್ಮ ಸಿದ್ಧಾಂತ, ಜನ್ಮಾಂತರದ ಸಿದ್ಧಾಂತಗಳ ಮೂಲಕ ಹಾಗೂ ಸಮೂಹದ ಒಟ್ಟಾರೆ ಸಂಕಲ್ಪವನ್ನು ನಾಶ ಮಾಡಿ ವ್ಯಕ್ತಿಯ ಮೋಕ್ಷವನ್ನು ಮಾತ್ರ ಪ್ರತಿಪಾದಿಸುವ ಮೂಲಕ ಜಾತಿ ವ್ಯವಸ್ಥೆಯನ್ನು ಸ್ಥಿರೀಕರಿಸಲಾಗಿದೆ. ಇದು ಇಡೀ ಸಮಾಜದಲ್ಲಿ ಪ್ರತಿಭೆ, ಅಭಿರುಚಿಗಳನ್ನು ಹತ್ತಿಕ್ಕಿ, ಎಲ್ಲ ರೀತಿಯ ನಿರ್ಬಂಧಗಳ ಮೂಲಕ ಪ್ರೀತಿಯನ್ನೂ ಹಾಗೂ ಸ್ನೇಹಿತರ ಮತ್ತು ಬಾಳ ಸಂಗಾತಿಯ ಆಯ್ಕೆಯನ್ನೂ ಸಹ ನಿರ್ಬಂಧಿಸುತ್ತಿದೆ ಎಂದು ಮೈಸೂರಿನ ಪ್ರಾಧ್ಯಾಪಕರಾದ ಕೆ. ರಾಮದಾಸ್ ಜಾತಿ ವ್ಯವಸ್ಥೆಯ ಆಳ–ಅಗಲಗಳನ್ನು ವಿಶ್ಲೇಷಿಸಿದರು.

ಈ ಜಾತಿ ವ್ಯವಸ್ಥೆ ಕಸುಬಿನ, ಉದ್ಯೋಗದ ಮಾರ್ಪಾಡಿನಿಂದ, ಕೈಗಾರಿಕೀಕರಣದಿಂದ, ಶಿಕ್ಷಣದಿಂದ—ಈ ಯಾವುದರಿಂದಲೂ ಬದಲಾಗಿಲ್ಲ, ಇದನ್ನು ತೊಡೆಯಬೇಕಾದರೆ ಅಂತರ್ಜಾತಿ ವಿವಾಹ ಇಡೀ ಸಮೂಹದ ಆದರ್ಶವಾಗಬೇಕಾಗಿದೆ. ಈ ದಿಕ್ಕಿನಲ್ಲಿ ಇಡುವ ಒಂದೊಂದು ಸಣ್ಣ ಹೆಜ್ಜೆಯೂ, ಒಂದೊಂದು ಸಣ್ಣ ಮದುವೆಯೂ ಸಹ ಸಮಾಜದ ತಳಪಾಯದ ಮೂಲಭೂತ ಬದಲಾವಣೆಗೆ ತಮ್ಮ ಕೊಡುಗೆ ನೀಡುತ್ತದೆ, ಆದ್ದರಿಂದ ಅದು ಸ್ವಾಗತಾರ್ಹ ಎಂದರು.

ಈಚೀಚೆಗೆ, ಆರ್ಥಿಕವಾಗಿ ಅತ್ಯಂತ ಮೇಲು ವರ್ಗಗಳಲ್ಲಿ ಯಾವ ಗಲಿಬಿಲಿಯೂ ಇಲ್ಲದೆ ಈ ಬಂಧನಗಳಿಂದ ವಿಮೋಚನೆಯಾಗುತ್ತಿದೆ. ಆದರೆ ಅದರಿಂದ ಒಟ್ಟಾರೆ ಜಾತಿ ವ್ಯವಸ್ಥೆ ಸಡಿಲಾಗುವುದಿಲ್ಲ. ಅದೇ ಕೆಳಕೆಳಕ್ಕೆ ಬಂದಂತೆ, ಅದರಲ್ಲೂ ಮುಖ್ಯವಾಗಿ ಕೆಳ ವರ್ಗಗಳ ಹೆಣ್ಣು ಮಕ್ಕಳಿಗೆ ವಿಮೋಚನೆಯ ಅವಕಾಶಗಳು ತೀರಾ ಕಮ್ಮಿ: ಅವರಿಗೆ ವಿದ್ಯೆ, ನಂತರ ಉದ್ಯೋಗ ದೊರೆತರೆ ಆಯ್ಕೆಯ ಹಕ್ಕು – ಅವಕಾಶ ದೊರೆಯುತ್ತವೆ. ಆದ್ದರಿಂದ ಶಿಕ್ಷಣ, ಅಂತರ ಜಾತಿ ಮದುವೆ ಮತ್ತು ಮೀಸಲಾತಿ—ಈ ವಿಚಾರಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಆ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತರಾಗಬೇಕಾಗಿದೆ ಎಂದು ರಾಮದಾಸ್ ಅಭಿಪ್ರಾಯ ಪಟ್ಟರು.

ಭಾರತದಲ್ಲಿ ಜಾತಿ ವ್ಯವಸ್ಥೆಯ ದುಷ್ಪ್ರಭಾವ ಎಷ್ಟು ಗಾಢವಾದುದೆಂಬುದಕ್ಕೆ ಅಂಬೇಡ್ಕರ್ ಮತ್ತು ಸ್ಟಾಲಿನ್‌ರ ಉದಾಹರಣೆ ನೀಡಿದ 'ಪ್ರಜಾವಾಣಿ' ಜಿಲ್ಲಾ ವರದಿಗಾರ ಸುಚೇತನ ಸ್ವರೂಪ್, "ಅಂಬೇಡ್ಕರ್ ಮತ್ತು ಸ್ಟಾಲಿನ್ ಇಬ್ಬರೂ ಮೋಚಿಗಳ ಜಾತಿಯಿಂದಲೇ ಬಂದವರು. ಅಂಬೇಡ್ಕರ್ ಕೂಡ ಅಪಾರ ಪಾಂಡಿತ್ಯ, ಸಾಮರ್ಥ್ಯ, ಅನುಭವ ಎಲ್ಲ ಹೊಂದಿದ್ದರು. ಸ್ಟಾಲಿನ್ ರಷ್ಯಾದಲ್ಲಿ ಅತ್ಯುನ್ನತ ಪದವಿಗೇರಿ ದೇಶವನ್ನು ಮುನ್ನಡೆಸಲು ಸಾಧ್ಯವಾಯಿತು. ಆದರೆ ಅಂಬೇಡ್ಕರ್ ಕೇವಲ ಹುಟ್ಟಿದ ಜಾತಿಯ ಒಂದೇ ಕಾರಣಕ್ಕೆ ಈ ದೇಶದ ಪ್ರಧಾನಮಂತ್ರಿಯಾಗಲಾರದೆ ಹೋದರು" ಎಂದರು.

ಆದರೆ ಈ ಎಲ್ಲ ಹೋರಾಟ ಜಾತೀಯತೆಯ ನಿರ್ಮೂಲನೆಗೆ ಮಾತ್ರ ಸೀಮಿತವಾಗದೆ ಅದಕ್ಕಿಂತಲೂ ಮೂಲಭೂತವಾದ ಬದಲಾವಣೆಯ ಕಡೆಗೆ ಹೋಗಬೇಕಾಗಿದೆ ಎಂದು ಅವರು ಹೇಳಿದರು.

ಜಾತಿಗಳೊಳಗೇ ಮದುವೆಯಾಗುವವರ ಮಕ್ಕಳಿಗಿಂತ ಅಂತರ್ಜಾತಿ ವಿವಾಹಿತರ ಮಕ್ಕಳು ದೈಹಿಕವಾಗಿಯೂ ಮಾನಸಿಕವಾಗಿಯೂ ಹೆಚ್ಚು ಆರೋಗ್ಯವಂತರೂ ಸಮರ್ಥರೂ ಆಗಿರುತ್ತಾರೆಂದು ವಿಜ್ಞಾನ ದೃಢಪಡಿಸಿದೆ. ಜನಸಾಮಾನ್ಯರು ಕೂಡ ತುಂಬಾ ಬುದ್ಧಿವಂತರನ್ನು 'ಬೆರಕೆ' ಎಂದು ಸಂಬೋಧಿಸುವ ಮೂಲಕ ಈ ಸತ್ಯವನ್ನು ಮನಗಂಡಿದ್ದಾರೆ ಎಂದ ಕೊಪ್ಪದ ವೈದ್ಯಾಧಿಕಾರಿ ಡಾ|| ಎಂ.ಜಿ. ಪ್ರಸಾದ್, ದೇಶದ ಮುಂದಿನ ಪೀಳಿಗೆಯನ್ನು ಉತ್ತಮಗೊಳಿಸಲು ಹೆಚ್ಚೆಚ್ಚು ಜನ ಅಂತರ್ಜಾತಿ ವಿವಾ

(3ನೇ ಪುಟಕ್ಕೆ

ಪದ್ಯದಂಕಣ

ಹರಿಜನ ಬಂಧುವಿಗೆ....

ಪ್ರಿಯ ಬಂಧು....
ಅಕ್ಟೋಬರ್ ಎರಡರ ಬೆಳಗ್ಗೆ ಎದ್ದು
ನಿನ್ನ ನೆನಪಾದದ್ದೇ ತಡ, ಎದ್ದು—
ಬಿದ್ದು ಓಡಿ ಬಂದೆ ನಿನ್ನ ಬಳಿಗೆ
ಆಹಾ—ಎಂಥಾ ನಿದ್ರೆ ನಿನಗೆ !
ನಿನ್ನ ಗೊರಕೆಯ ಆಲಾಪ
ಏನೊಂದು ಹಿತ ನನ್ನ ಕಿವಿಗಳಿಗೆ
ಭಂಗ ತರುವುದಿಲ್ಲ ಈ ರಸ ಗಳಿಗೆಗೆ.
ಇಲ್ಲ – ತಟ್ಟಿ ಎಬ್ಬಿಸುವುದಿಲ್ಲ
ತಮ್ಮಾ, ತಟ್ಟಿ 'ಲಾಲೀ' ಪದ ಹೇಳುತ್ತೇನೆ
ನಿನಗೆ ಬೇಡ ಚಿಂತೆ—
ನಾನೇ ಸಾರಿಸಿ ರಂಗವಲ್ಲಿ ಇಡುತ್ತೇನೆ,
ನಿನ್ನ ಗುಡಿಸಲ ಕಸ ಬಳಿದು ಕೊಡುತ್ತೇನೆ.
ಮುಂದಿನ ಅಕ್ಟೋಬರ್ ಎರಡರಂದು
ಬರುತ್ತೇನಲ್ಲ — ಬಂದು,
ಓ ನನ್ನ ಪ್ರಿಯ ಬಂಧು,
ಮತ್ತೆ ರಂಗವಲ್ಲಿ, ಕಸ ಗುಡಿಸುವಿಕೆ
ಕಸ ಪೇರಿಸುವಿಕೆ – ಮಾಡುತ್ತೇನೆ.
ಆದರೆ ಕ್ಷಮಿಸು,
ನಿನ್ನ ನಿದ್ರೆಗೆ ಭಂಗ ತರುತ್ತೇನೆ
ಕ್ಷಮಿಸಯ್ಯಾ
ಐದು ವರುಷಕ್ಕೊಮ್ಮೆ ಬಂದು ನಿನ್ನನ್ನು
ತಟ್ಟಿ ಎಬ್ಬಿಸುತ್ತೇನೆ.
ಒಂದೇ ಒಂದು ಘಂಟೆ ಸಾಕು
ಮತ್ತೆ ನಿದ್ರೆ ಮಾಡಬಹುದು ನೀನು
ಬೆಚ್ಚದಿರು, ಬೆದರದಿರು
ಕನಸಿನಲಿ ಗಾಂಧೀ ಮಹಾತ್ಮನೂ
ಬರದಂತೆ – ಪ್ರಾರ್ಥಿಸುತ್ತೇನೆ.
ಆಗದೆ ?

—ಡಾ| ಸಂ. ರಾ. ಕೋದಂಡರಾವ್

ಜಾತಿವ್ಯವಸ್ಥೆ, ಅಂತರ್ಜಾತಿವಿವಾಹ: ಚರ್ಚೆಯ ಕೆಲ ಮುಖ್ಯಾಂಶಗಳು

(2ನೇ ಪುಟದಿಂದ)

ಹಕ್ಕೆ ಮನಸ್ಸು ಕೊಡಬೇಕೆಂದರು.

ಪುರುಷಪ್ರಧಾನ ಸಮಾಜ ವ್ಯವಸ್ಥೆಯಲ್ಲಿರುವ ಹೆಣ್ಣಿನ ಬಗೆಗಿನ ತಾರತಮ್ಯ ಅಂತರಜಾತಿ ವಿವಾಹವಾದವರಲ್ಲೂ ಮುಂದುವರಿಯುವ ಸಾಧ್ಯತೆಯಿದೆಯೆಂದ ನರಾ. ಪುರದ ನ್ಯಾಯವಾದಿ ಶ್ರೀಮತಿ ಶಶಿಕಲಾ ಅವರು, ಜಾತೀಯತೆಯ ಜೊತೆಗೇ ಲಿಂಗಭೇದ ಆಧಾರಿತ ತಾರತಮ್ಯವನ್ನೂ ಹೋಗಲಾಡಿಸಿ, ಗಂಡು – ಹೆಣ್ಣಿನ ನಡುವೆಯೂ ಸಮಾನತೆ ಸಾಧಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್ ಮುಂತಾದವರ ಸಾಮಾಜಿಕ–ರಾಜಕೀಯ ಸಿದ್ಧಾಂತಗಳ ಆಳವಾದ ಅಧ್ಯಯನ ಮತ್ತು ಅನುಭವದ ಗಟ್ಟಿ ನೆಲೆಯ ಚಿಂತನೆಗಳುಳ್ಳವಡ್ಡರ್ಸೆ ರಘುರಾಮ ಶೆಟ್ಟರ ಅಧ್ಯಕ್ಷ ಭಾಷಣದ ಆರಂಭವಲ್ಲಿ ಅಲ್ಪ–ಸ್ವಲ್ಪ ಭಾವೋದ್ವೇಗ ಕಂಡು ಬಂದರೂ, "ನಾನು ಸುಮ್ಮನೆ ಮಾತಾಡುವುದಲ್ಲ, ಜಾತಿ ವ್ಯವಸ್ಥೆಯ ಅಮಾನುಷತೆಯನ್ನು ಸ್ವತಃ ಅನುಭವಿಸಿದ್ದೇನೆ; ನನ್ನ ದೇಶದ ಅಸಂಖ್ಯಾತ ಜನ ಸಾಮಾನ್ಯರು ಈ ಕ್ರೌರ್ಯಕ್ಕೆ ಸಿಕ್ಕಿ ಸೊರಗಿರುವುದನ್ನು ಕಂಡು ಅಪಾರವಾಗಿ ನೋವು ಅನುಭವಿಸಿದ್ದೇನೆ" ಎಂದ ಅವರ ಮಾತು ಇದಕ್ಕೆ ಸರಿಯಾದ ಕಾರಣ ಒದಗಿಸಿತ್ತು.

ಕೊಳೆತು ನಾರುತ್ತಿರುವ ಈ ಜಾತಿ ವ್ಯವಸ್ಥೆ ಮನುಷ್ಯನ ವಿಕಸನದ ದಾರಿಗಳನ್ನೆಲ್ಲ ಮುಚ್ಚಿದೆ, ಅವನ ಬದುಕಿಗೇ ಮಾರಕವಾಗಿದೆ. ಇದನ್ನು ತೊಲಗಿಸಲು ಚಿಂತನಶೀಲರು. ಉತ್ತಮ ಬದುಕನ್ನು ಬಯಸುವ ಎಲ್ಲ ಯುವಜನರು ಸೇರಿ ವ್ಯವಸ್ಥಿತವಾದ ಆಂದೋಲನ ಆಗಬೇಕಿದೆ; ಅದರಿಂದುಂಟಾಗುವ ಅರಾಜಕತೆಯಿಂದ ಹೊಸ ನಾಯಕತ್ವ ಬೆಳೆಯಬೇಕಾಗಿದೆ ಎಂದು ವಡ್ಡರ್ಸೆ ಯಾವ ಅಳುಕಿಲ್ಲದೆ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಮುಂಡಿಸಿದರು.

ಈ ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಜಾತಿ ವ್ಯವಸ್ಥೆಯನ್ನು ತೊಡೆಯಬಹುದೆಂದು ಎಲ್ಲರೂ ನಿರೀಕ್ಷಿಸಿದ್ದೆವು. ಆದರೆ ಅದು ಕನಸಾಯಿತು. ಪ್ರಗತಿ, ಸಮಾನತೆಗಳತ್ತ ಒಂದು ಹೆಜ್ಜೆ ಕೂಡ ಮುಂದಿಡಲು ಸಾಧ್ಯವಿಲ್ಲದಷ್ಟು ಅದು ಬಲಿಷ್ಠವಾಗಿದೆ. ಇದರ ನಿರ್ಮೂಲನೆಗೆ ನಾಲ್ಕಾರು ದಾರಿಗಳನ್ನು ಯೋಚಿಸಬೇಕಿದೆ. ಅದರಲ್ಲಿ ಅಂತರ್ಜಾತಿ ವಿವಾಹವು ಬಹಳ ಪರಿಣಾಮಕಾರಿಯಾದ ಒಂದು ಸಾಧನ ಎಂದು ವಡ್ಡರ್ಸೆ ಹೇಳಿದರು

ಭಾರತೀಯರಿಗೆ ಮೇಲಂತಸ್ತಿನವರನ್ನು ಅನುಕರಿಸುವ ತೆವಲು ಇರುವುದರಿಂದ ಐ.ಎ.ಎಸ್., ಐ.ಪಿ.ಎಸ್.ಗಳಂಥ ಉನ್ನತ ಹುದ್ದೆಗಳಲ್ಲಿ ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ ನೀಡಬೇಕು. ಆಗಲಾದರೂ ಅಂತರ್ಜಾತಿ ವಿವಾಹ ಅಪರೂಪವಾಗಿ ಉಳಿಯದೆ ಭಾರತೀಯ ಸಮಾಜದ ಪ್ರಾತಿನಿಧಿಕ ವಿವಾಹ ಪದ್ಧತಿಯಾದೀತು ಎಂದರು.

ನಮ್ಮಲ್ಲೇ ದಲಿತರನ್ನು ಊರ ಹೊರ ... ಮೇಲೆ ಬರ್ಬರ ಕ್ರೌರ್ಯ ನಡೆಸುವ ಈ ದೇಶದಲ್ಲಿ ನಾವು, ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ಕರಿಯರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯ ಬಗ್ಗೆ ಬೊಬ್ಬೆ ಹೊಡೆಯುತ್ತೇವೆ. ಅಲ್ಲಿನ ಸರ್ಕಾರದ ಈ ದಬ್ಬಾಳಿಕೆಯಲ್ಲೂ ಕರಿಯರಲ್ಲಿ ಶೇ. 80ರಷ್ಟು ಜನ ವಿದ್ಯಾವಂತರಾಗಿದ್ದಾರೆ ಆದರೆ 'ಸ್ವತಂತ್ರ ಸರ್ಕಾರ' ಇರುವ ನಮ್ಮ ದೇಶದಲ್ಲಿ ಬರೀ ಅಕ್ಷರಸ್ಥರ ಸಂಖ್ಯೆ ಶೇ. 40ರಷ್ಟು ಕೂಡ ಇಲ್ಲ. ಇಂಥದರಲ್ಲಿ ನಾವು ದ. ಆಫ್ರಿಕದ ಬಗ್ಗೆ ಮಾತಾಡುವುದು ಹಾಸ್ಯಾಸ್ಪದ ಎಂದರು.

ದೇಶದ ದಟ್ಟ ದಾರಿದ್ರ್ಯಕ್ಕೆ ಮೂಲ ಕಾರಣವಾಗಿರುವ ಈ ಜಾತಿ ವ್ಯವಸ್ಥೆಯನ್ನು ಬಲವಂತದಿಂದಲೇ ಹೋಗಲಾಡಿಸಬೇಕಾಗಿದೆ. ಕೇವಲ 25 ವರ್ಷ ಕಾಲ, ಅಂದರೆ ಒಂದು ತಲೆಮಾರಿನ ಕಾಲ, ಅಂತರ್ಜಾತಿ ವಿವಾಹವನ್ನು ರಾಜ್ಯಾಂಗಬದ್ಧವಾಗಿ ಕಡ್ಡಾಯಗೊಳಿಸಬೇಕು. ಅದಕ್ಕೆ ಒತ್ತಾಯ ಮತ್ತು ಆಮಿಷ (ಇನ್‌ಸೆಂಟಿವ್) ಎರಡನ್ನೂ ಬಳಸಬೇಕು. ಆಗ ಜಾತಿ ತಾನೇ ತಾನಾಗಿ ನಾಶವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾವೇಶದಲ್ಲಿ ಭಾಗವಹಿಸಿದವರ ಪೈಕಿ ಶಿವಮೊಗ್ಗದ 'ಅಂತರ್ಜಾತಿ ವಿವಾಹಿತರ ಕ್ಷೇಮಾಭಿವೃದ್ಧಿ ಸಂಘ'ದ ಆರಾಧ್ಯ ತಮ್ಮ ಮತ್ತು ವಿಚಿತ್ರ ಕೆಲವು ಕಟು ಅನುಭವಗಳನ್ನು ವಿವರಿಸಿ. ಕೆಲವು ಸಂದರ್ಭಗಳಲ್ಲಿ ಅಂತರಜಾತಿ ವಿವಾಹಿತರಿಗೆ ಈ ಸಮಾಜ ಕೊಡುವ ಕಿರುಕುಳಗಳಿಂದ ರಕ್ಷಣೆ ಪಡೆಯಲು ಆರಂಭಿಸಿರುವ ತಮ್ಮ ಸಂಘಕ್ಕೆ ಹಿರಿಯ ವಿಚಾರವಂತರುಗಳು ಸದಸ್ಯರಾಗಿ ಮಾರ್ಗದರ್ಶನ ನೀಡಬೇಕೆಂದು ಮನವಿ ಮಾಡಿದರು.

ಗೌರಿಬಿದನೂರಿನ ಕಾಲೇಜು ಉಪನ್ಯಾಸಕ, ಸ್ವತಃ ಅಂತರ್ಜಾತಿ ವಿವಾಹಿತರಾದ ಬಸವರಾಜು ಮಾತನಾಡಿ, ನಾವು ಮನುಷ್ಯರಾಗುವುದಕ್ಕಾಗಿ ಅಂತರ್ಜಾತಿ ವಿವಾಹ ಆಗಬೇಕಾಗಿದೆ ಎಂದರಲ್ಲದೆ, ಅಂತರ್ಜಾತಿ ವಿವಾಹ ಆಗಬೇಕಾದ ಪರಿಸ್ಥಿತಿಯಿರುವುದಕ್ಕೆ ಈ ಸಮಾಜವೇ ಹೊಣೆ. ಏಕೆಂದರೆ ನಮ್ಮ ಪೂರ್ವಿಕರು ಮಾಡಿದ ತಪ್ಪಿನ ಋಣವನ್ನು ನಾವು ತಿದ್ದಿ ತೀರಿಸುತ್ತಿದ್ದೇವೆ. ಆದ್ದರಿಂದ ಅಂತರ್ಜಾತಿ ವಿವಾಹಿತರ ಯೋಗಕ್ಷೇಮದ ಹೊಣೆಯನ್ನೂ ಈ ಸಮಾಜವೇ ಹೊರಬೇಕು ಎಂದರು.

ಎಡನೆಯದಾಗಿ, ಮಾಮೂಲಿ ಮದುವೆಗಳು ಎಷ್ಟೇ ಅವ್ಯವಸ್ಥೆಗೊಳಗಾದರೂ ಟೀಕಿಸದ ಸಮಾಜ, ಅಂತರ್ಜಾತಿ ವಿವಾಹಿತ ದಂಪತಿಗಳಲ್ಲಿ ಸ್ವಲ್ಪ ಏರುಪೇರಾದರೂ ಅದನ್ನೇ ದೊಡ್ಡದು ಮಾಡಿ, ಗೂಬೆ ಕೂರಿಸುತ್ತದೆ. ಆದ್ದರಿಂದ ನಾವು ಅಂಥದಕ್ಕೆ ಅವಕಾಶ ಕೊಡದೆ, ಅತಿ ಹೆಚ್ಚಿನ ಹೊಂದಾಣಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಿರಿಮನೆ ನಾಗರಾಜ್ ಮಾತನಾಡಿ, ಜಾತಿಯೊಳಗೆ ನಡೆಯುವ ಮದುವೆಗಳಲ್ಲಿ ಕೂಡ ವಧೂ–ವರರಾಗಲಿ ಅವರ ಕುಟುಂಬ ವರ್ಗದವರಾಗಲಿ ಹೆಚ್ಚಾಗಿ ಅಪರಿಚಿತರೇ ... ಕೊಂಡು ಬಾಳುತ್ತಾರೆ. ಅಂತೆಯೇ ಅಂತರಜಾತಿ ವಿವಾಹಿತರಲ್ಲಿ ಕೂಡ ಇದು ಸಾಧ್ಯ. ಅಂದರೆ ಅಂತರ್ಜಾತಿ ಮದುವೆಗೆ ಹುಡುಗ–ಹುಡುಗಿ ಮೊದಲೇ ಪರಿಚಿತರಾಗಿರಬೇಕು ಅಥವಾ ಪ್ರೇಮ ವಿವಾಹ ಮಾತ್ರ ಸಾಧ್ಯ ಎಂಬ ನಂಬಿಕೆ ಸರಿಯಲ್ಲ. ಆದ್ದರಿಂದ ನಾವು ನಮ್ಮ ಪರಿಚಿತರಲ್ಲಿ ಮದುವೆ ಸಂಬಂಧಗಳನ್ನು ಕುದುರಿಸುವುದಿದ್ದರೆ ಆದಷ್ಟೂ ಅಂತರಜಾತಿ ಮದುವೆಗಳನ್ನೇ ಕುದುರಿಸಲು ಶ್ರಮಿಸಬೇಕು ಎಂದರು.

ಅಂತರಜಾತಿ ವಿವಾಹ ಯಾರೋ 'ಬಿಕನಾಸಿ'ಗಳು ಎಲ್ಲೋ ಊರು–ಮನೆ ಬಿಟ್ಟು 'ಓಡಿ ಹೋಗಿ' ಮಾಡಿಕೊಳ್ಳುವಂಥದು ಮುಂತಾದ ಕಲ್ಪನೆಗಳು ಅಳಿದು, ಇದೂ ಒಂದು ಸಹಜವಾದ ವಿವಾಹವೇ ಎಂಬ ಭಾವನೆ ಸಮಾಜದಲ್ಲಿ ಬೆಳೆಯುವಂತಾಗಬೇಕಾದರೆ, ಹುಡುಗ–ಹುಡುಗಿ — ಈ ಎರಡೂ ಕಡೆಯ ಬಂಧುಗಳೂ ಸೇರಿ ಇಂಥ ಮದುವೆಗಳಲ್ಲಿ ಪಾಲ್ಗೊಳ್ಳುವುದು ಹೆಚ್ಚಬೇಕು ಎಂದೂ ಕರೆ ನೀಡಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಕೆ. ಸುಂದರೇಶ್ ಮಾತನಾಡಿ, ಭಾಷಣ ಮತ್ತು ಚರ್ಚೆಗಳಲ್ಲಿ ಕಮ್ಯುನಿಸಂ ಬಗ್ಗೆ ಕೇಳಿ ಬಂದ ಕೆಲವು ತಪ್ಪು ವಿಚಾರಗಳ ಬಗ್ಗೆ ತಮ್ಮ ನಿಲುವನ್ನು ವಿವರಿಸಿದರು. ಹಲವು ಸಂದರ್ಭಗಳಲ್ಲಿ ಒಬ್ಬ ವರ ಅಥವಾ ವಧುವಿಗೆ ಆಯಾ ಜಾತಿಯೊಳಗೇ ಅನುರೂಪ ಸಂಗಾತಿಯನ್ನು ಹುಡುಕಲು ಕಷ್ಟವಾಗುತ್ತಿದೆ. ಅಂತರ್ಜಾತಿ ವಿವಾಹ ವ್ಯಾಪಕವಾಗಿ ಬಳಕೆಗೆ ಬಂದಲ್ಲಿ ಈ ಸಮಸ್ಯೆ ಇರುವುದಿಲ್ಲ ಎಂದು ಅವರು ಅಂತರ್ಜಾತಿ ವಿವಾಹವನ್ನು ಸಮರ್ಥಿಸಿದರು.

ಸಮಾರಂಭದ ಮೊದಲಿಗೆ ಸಮಾವೇಶದ ಹಿನ್ನೆಲೆ ಕುರಿತು ಮಾತನಾಡಿದ ಕಲ್ಕುಳಿ ವಿಠಲ ಹೆಗ್ಡೆ, ಅಂತರ್ಜಾತಿ ಮದುವೆ ಆಗಿಯೂ ಎರಡರಲ್ಲೊಂದು ಜಾತಿಗೆ ಸೇರಿ ಹೋಗುವವರಿಂದ ಜಾತಿ ವ್ಯವಸ್ಥೆ ಅಳಿಯುವುದಿಲ್ಲ. ಅಂಥವರಿಗೆ ಸಮಾಜದ ರಕ್ಷಣೆಯೂ ಇಲ್ಲವಾಗುವುದಿಲ್ಲ ಆದರೆ ಯಾವುದೇ ಜಾತಿಗೆ ಸೇರದೆ ಜಾತ್ಯತೀತರಾಗಿ ಉಳಿಯುವವರಿಂದಾಗಿ ನಿಜವಾಗಿ ಜಾತಿ ಪದ್ಧತಿ ಅಳಿಯಲು ಸಾಧ್ಯ. ಇಂಥವರಿಗೆ ಸಮಾಜದಲ್ಲಿ ಪ್ರೀತಿ ಮತ್ತು ಭದ್ರತೆಗಳು ಸಹ ಇಲ್ಲವಾಗಿವೆ. ಇಂಥವರನ್ನು ಒಟ್ಟುಗೂಡಿಸಿ, ಪರಸ್ಪರ ನೆರವಾಗುವ, ನೈತಿಕವಾಗಿ ಬೆಂಬಲವಾಗುವ ಹಾಗೂ ಸಮಾಜದಲ್ಲಿ ಭದ್ರತೆ ದೊರಕಿಸುವ ಒಂದು ವ್ಯವಸ್ಥೆ ಇಂದು ಅಗತ್ಯವಾಗಿದೆ. ಇದರಿಂದ, ಅಂತರ್ಜಾತಿ ವಿವಾಹವಾಗಬಯಸುವ ಹೊಸ ಜೋಡಿಗಳಿಗೆ ಸಹ ಧೈರ್ಯ ಮೂಡುತ್ತದೆ ಎಂದರು.

ಈ ದಿಕ್ಕಿನಲ್ಲಿ ಸಮಾನ ವಿಚಾರಗಳುಳ್ಳವರನ್ನು ಒಟ್ಟುಗೂಡಿಸಿ ಒಂದು ಕಾರ್ಯಕ್ರಮ ರೂಪಿಸುವುದರ ಜೊತೆ ಜೊತೆಗೇ, ಮೂಢನಂಬಿಕೆ. ಜಾತಿ ಪದ್ಧತಿ, ಮತೀಯ ದಬ್ಬಾಳಿಕೆ ಮತ್ತು ಸರ್ವೇಸಾಮಾನ್ಯವಾಗಿ ಶೋಷಣೆ—ಇವುಗಳನ್ನು ವಿರೋಧಿಸುವ ಹಾಗೂ ಇಡೀ ಸಮಾಜದಲ್ಲಿ ಮಾನವೀಯ ಬದುಕನ್ನು ಕಾಣಬಯಸುವ ಎಷ್ಟೋ ಮಂದಿ ವಿವಿಧ ಪಕ್ಷಗಳ, ಸಂಘಟನೆಗಳ ಅಡಿಯಲ್ಲಿ ಹಂಚಿ ಹೋಗಿದ್ದು, ಇವರೆಲ್ಲ ಕನಿಷ್ಠ ಕೆಲವು ಸಾಮಾನ್ಯ ಕಾರ್ಯಕ್ರಮಗಳ ಆಧಾರದ ಮೇಲಾದರೂ ಒಟ್ಟಾಗಿ ಕೆಲಸ ಮಾಡುವಂತೆ ಪ್ರಯತ್ನಿಸುವುದನ್ನು ಸಹ ದೃಷ್ಟಿಯಲ್ಲಿಟ್ಟುಕೊಂಡು ಈ ಸಮಾವೇಶವನ್ನು ಸಂಘಟಿಸಿರುವುದಾಗಿ ವಿಠಲ ಹೆಗ್ಡೆ ವಿವರಿಸಿದರು.

ಕೊನೆಯಲ್ಲಿ ಸಮಾವೇಶದ ನಿರ್ಣಯಗಳನ್ನು ವಿಚಾರವಾದಿ ವೇದಿಕೆಯ ಪರವಾಗಿ ಮಂಡಿಸಿದ ಎಂ. ಡಿ. ಗಂಗಯ್ಯ, ಇಂಥದೊಂದು ಸಮಾವೇಶ ನಡೆಸುವ ಬಗ್ಗೆ ವಿಚಾರವಾದಿ ಗೆಳೆಯರು ಸಮಾಲೋಚಿಸುತ್ತಿದ್ದಾಗ, ಶೃಂಗೇರಿಯಲ್ಲಿ ಈಚೆಗೆ ಬ್ರಾಹ್ಮಣ ಮತ್ತು ಅಸ್ಪೃಶ್ಯ ಜಾತಿಯವರ ನಡುವೆ ನಡೆದ ಸರಳ ಮದುವೆಗೆ ಶೃಂಗೇರಿ ಮತ್ತು ಸುತ್ತಮುತ್ತಲಿನ ಪಟ್ಟಭದ್ರರಿಂದ ಉಂಟಾದ ಬಹಿಷ್ಕಾರ, ಪ್ರಾಯಶ್ಚಿತ್ತ ಮುಂತಾದ ಅಮಾನುಷ ನಡವಳಿಕೆಗಳ ಹಿನ್ನೆಲೆಯಲ್ಲಿ ಸಮಾವೇಶವನ್ನು ಇಲ್ಲೇ ಏರ್ಪಡಿಸಬೇಕೆಂದು ವೇದಿಕೆಯ ಗೆಳೆಯರು ನಿರ್ಧರಿಸಿದ್ದಾಗಿ ತಿಳಿಸಿದರು.

ಕೊಪ್ಪ ಆಸ್ಪತ್ರೆ ಕಟ್ಟಡಕ್ಕೆ ವಿಧ್ಯುಕ್ತ ಪೂಜೆ

ಕೊಪ್ಪ : ಇಲ್ಲಿನ ಸರ್ಕಾರಿ ಆಸ್ಪತ್ರೆಯ ಆಡಳಿತ ವಿಭಾಗದ ಕಟ್ಟಡಕ್ಕೆ ವಿಧ್ಯುಕ್ತವಾದ ಭೂಮಿ ಪೂಜೆಯನ್ನು ಸೆ 21ರಂದು ದಿ|| ಎಂ. ಎಸ್. ದೇವೇ ಗೌಡರ ಪತ್ನಿ ಶ್ರೀಮತಿ ಪುಟ್ಟಮ್ಮನವರು ನೆರವೇರಿಸಿದರು. ಈ ಕಟ್ಟಡಕ್ಕಾಗಿ ಎಂ ಡಿ. ಬಾಲಕೃಷ್ಣರವರು 6 ಲಕ್ಷ ರೂ. ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಶಾಸಕ ಗೋವಿಂದ ಗೌಡರು ಅಧ್ಯಕ್ಷತೆ ವಹಿಸಿದ್ದ ಈ ಸರಳ ಸಮಾರಂಭದಲ್ಲಿ ಎಂ. ಡಿ. ಬಾಲಕೃಷ್ಣ, ಪಿ.ಜಿ. ಗುರ್ಜರ್, ಬಿ. ಜಿ. ಚಿದಂಬರ್, ಲೋ|| ಇಲಾಖೆ ಎ|| ಇಂಜಿನಿಯರ್ ರಾಧಾಕೃಷ್ಣ ರೆಡ್ಡಿ, ಕೆ. ವಿ. ಮಂಜುನಾಥ ಶೆಟ್ಟಿ ಅತಿಥಿಗಳಾಗಿದ್ದರು.

ಅನಂತರ ಅತಿಥಿಗಳು ಆಸ್ಪತ್ರೆಯ ಎಲ್ಲ ವಿಭಾಗಗಳನ್ನೂ ಸಂದರ್ಶಿಸಿದರು. ಆಸ್ಪ... ವ ಅತ್ಯಗತ್ಯ ಕೆಲಸಗಳನ್ನು ವೈದ್ಯಾಧಿಕಾರಿ ಡಾ|| ಎಂ.ಜಿ. ಪ್ರಸಾದ್ ಅತಿಥಿಗಳಿಗೆ ವಿವರಿಸಿದರು.

ಸಂಸ್ಕೃತೋತ್ಸವ

ಹರಿಹರಪುರ : ಇಲ್ಲಿನ ಕಿರಿಯ ಕಾಲೇಜಿನಲ್ಲಿ ಸಂಸ್ಕೃತೋತ್ಸವವನ್ನು ಕಾಲೇಜು ಪ್ರಿನ್ಸಿಪಾಲ್ ಎಸ್ ವಿ. ಅಡಿಗರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಕೊಪ್ಪ ಕಿ. ಕಾಲೇಜು ಸಂಸ್ಕೃತ ಉಪನ್ಯಾಸಕರಾದ ಪಿ.ವಿ. ಭಟ್ ಮುಖ್ಯ ಅತಿಥಿಯಾಗಿದ್ದರು.

ಸುಭಾಷಿತಗಳನ್ನು ತಾತ್ಪರ್ಯದೊಂದಿಗೆ ಹೇಳುವ ಸ್ಪರ್ಧೆಯಲ್ಲಿ ಕೆ. ಎನ್ ಅನಿಲ್ ಕುಮಾರ್, ಪಿ. ಕೆ. ವಿಜಯಲಕ್ಷ್ಮಿ ಮತ್ತು ವಿ. ಎಸ್ ಬಿಂದು ಬಹುಮಾನ ಗಳಿಸಿದರು.

ಪ. ಜಾತಿ / ಪಂಗಡಗಳಿಗೆ ಜಾತಿ ದೃಢೀಕರಣ ಪತ್ರ ನೀಡುವ ಬಗ್ಗೆ ತಿಳುವಳಿಕೆ

ಶೃಂಗೇರಿ: ಸರ್ಕಾರದ ಪರಿಷ್ಕೃತ ಆದೇಶದಂತೆ, ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದ ಜನರಿಗೆ ಖಾಯಂ ಆಗಿ ಜಾತಿ ದೃಢೀಕರಣ ಪತ್ರವನ್ನು ಇಲ್ಲಿನ ತಾ|| ಕಛೇರಿಯಿಂದ ನೀಡಲಾಗುವುದು. ಇದನ್ನು ಪಡೆಯಬಯಸುವವರು ನಿಗದಿತ ನಮೂನೆಯಲ್ಲಿ ತನ್ನ ಪಾಸ್ ಪೋರ್ಟ್ ಸೈಜ್ ಫೋಟೊಗಳನ್ನು ದ್ವಿಪ್ರತಿಯಲ್ಲಿ ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ಒಮ್ಮೆ ನೀಡಿದ ಈ ದೃಢೀಕರಣ ಪತ್ರದ ಫೋಟೋಸ್ಟಾಟ್ ಪ್ರತಿಗಳನ್ನು ಮಾಡಿಸಿ ಶಿಕ್ಷಣ ಸಂಸ್ಥೆಗಳಿಗೆ, ಉದ್ಯೋಗಕ್ಕೆ ಹಾಗೂ ಇತರೆ ಅನುಕೂಲಗಳಿಗೆ ಉಪಯೋಗಿಸಿಕೊಳ್ಳಬಹುದು. ಅಸಲು ದೃಢೀಕರಣ ಪತ್ರವನ್ನು ಎಲ್ಲಿಯೂ ಸಹ ಕೊಡಬಾರದು. ದೃಢೀಕರಣ ಪತ್ರವನ್ನು ಒಮ್ಮೆ ಮಾತ್ರ ನೀಡಲಾಗುವುದು ಎಂದು ತಹಸೀಲ್ದಾರ್ ತಿಳಿಸಿದ್ದಾರೆ.

'ಗಂಗಾ ಕಲ್ಯಾಣ' ಕಾಮಗಾರಿ ಶೀಘ್ರವಾಗಿ ಕೈಗೊಳ್ಳಲು ದ. ಸಂ. ಸ. ಆಗ್ರಹ

ಕೊಪ್ಪ: ಈ ತಾಲ್ಲೂಕಿನ ಬೆಳಗೊಳದಲ್ಲಿ 9 ಜನ ಮತ್ತು ತಮ್ಮಡವಳ್ಳಿಯಲ್ಲಿ 38 ಜನ ದಲಿತರಿಗೆ 82-83ರಲ್ಲಿ ಭೂಮಿ ಮಂಜೂರಾಗಿದ್ದು, ನೀರಿನ ಸೌಕರ್ಯ ಸ್ವಲ್ಪವೂ ಇಲ್ಲದೆ ಫಸಲು ಬೆಳೆಯಲು ಸಾಧ್ಯವಾಗಿಲ್ಲ. ತಮ್ಮಡವಳ್ಳಿಯಲ್ಲಿ ಏತ ನೀರಾವರಿಯ ಕೆಲಸವನ್ನು ಕಂಟ್ರಾಕ್ಟರ್‌ಗಳು ಅರ್ಧಕ್ಕೆ ನಿಲ್ಲಿಸಿದ್ದಾರೆ. ಅವನ್ನು 'ಗಂಗಾ ಕಲ್ಯಾಣ' ಯೋಜನೆಯಲ್ಲಿ ಪೂರೈಸಲು ಮತ್ತು ಬೆಳಗೊಳಕ್ಕೂ ಇದೇ ಯೋಜನೆಯಲ್ಲಿ ನೀರು ಒದಗಿಸಲು ಕರಡು ಯೋಜನೆಗಳನ್ನು ಮೇಲಧಿಕಾರಿಗಳ ಮಂಜೂರಾತಿಗೆ ಕಳಿಸಲಾಗಿದೆ.

ಈ ಯೋಜನೆಗಳನ್ನು ಕೂಡಲೇ ಮಂಜೂರು ಮಾಡಿ ಕೆಲಸ ಆರಂಭಿಸಬೇಕೆಂದು ಒತ್ತಾಯಿಸಿ ಕೊಪ್ಪ ತಾ|| ದಲಿತ ಸಂಘರ್ಷ ಸಮಿತಿ ಶಾಸಕರಿಗೂ ಮೇಲಧಿಕಾರಿಗಳಿಗೂ ಮನವಿ ಸಲ್ಲಿಸಿದ್ದು ಇದು ಈಡೇರದಿದ್ದಲ್ಲಿ ತೀವ್ರ ಚಳುವಳಿ ನಡೆಸುವುದಾಗಿ ಎಚ್ಚರಿಸಿದೆ.

ಸಕ್ಕರೆ ವಶ

ಕೊಪ್ಪ: ಇಲ್ಲಿಗೆ ಸಮೀಪದ ಕೆಸವೆ ಸಹಕಾರ ಸಂಘದ್ದೆನ್ನಲಾದ ಒಂದು ಮೂಟೆ ಸಕ್ಕರೆಯನ್ನು ಅ. 7ರಂದು ತಹಸೀಲ್ದಾರ್‌ರವರು ಇಲ್ಲಿನ ಬಸ್ ಸ್ಟಾಂಡ್ ಬಳಿ ವಶಪಡಿಸಿಕೊಂಡಿದ್ದಾರೆ.

ಶೃಂಗೇರಿ ಫಿರಂಗಿ ಗುಡ್ಡದ ಭೂಮಿ ಸಮಸ್ಯೆಗೆ ತೆರೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಹಲವು ವರ್ಷಗಳಿಂದ ಪರಿಹಾರ ಕಾಣದಿದ್ದ ಶೃಂಗೇರಿಯ ಫಿರಂಗಿ ಗುಡ್ಡದ ಮೇಲೆ ಮುಸ್ಲಿಮರ ದರ್ಗಾಕ್ಕೆ ಭೂಮಿ ಮಂಜೂರು ಮಾಡುವ ಪ್ರಶ್ನೆ ಈಚೆಗೆ ಇತ್ಯರ್ಥವಾಗಿದೆ.

ಅಲ್ಲಿ 8 ಗುಂಟೆ ಭೂಮಿಯನ್ನು ದರ್ಗಾ ಸಮಿತಿಗೆ ಮಂಜೂರು ಮಾಡಿ ಸಾಗುವಳಿ ಚೀಟಿಯನ್ನು ಜಿಲ್ಲಾಧಿಕಾರಿಗಳು ಕಳೆದ ವಾರ ನೀಡಿದರು.

ಪದಾಧಿಕಾರಿಗಳು

ಕಲ್ಲುಗುಡ್ಡೆ: ಇಲ್ಲಿನ ವಿವೇಕಾನಂದ ಯುವಕ ಸಂಘಕ್ಕೆ ಎಸ್. ಟಿ. ಗಣಪತಿ (ಅಧ್ಯಕ್ಷ), ಎಚ್. ಕೆ. ವೀರಪ್ಪ (ಉಪಾಧ್ಯಕ್ಷ), ಎಂ. ಸುಬ್ರಮಣ್ಯ (ಕಾರ್ಯದರ್ಶಿ), ಜೆ. ಕೆ. ಸುಧಾಕರ್ (ಸಹಕಾರ್ಯದರ್ಶಿ) ಹಾಗೂ 8 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಉಚಿತ ಕಾನೂನು ನೆರವು ಶಿಬಿರ

ನ. ರಾ. ಪುರ: ಇಲ್ಲಿನ ಉಚಿತ ಕಾನೂನು ನೆರವು ಸಮಿತಿ ಅ. 4ರಂದು ಮುತ್ತಿನಕೊಪ್ಪದಲ್ಲಿ ಉಚಿತ ಕಾನೂನು ನೆರವು ಶಿಬಿರ ಏರ್ಪಡಿಸಿತ್ತು. ತಹಸೀಲ್ದಾರ್ ಮಲ್ಲೇಶ್ ಕಾರ್ಯಕ್ರಮ ಉದ್ಘಾಟಿಸಿದರು. ವಕೀಲರಾದ ಎಚ್. ಎಸ್. ರಾಮರಾವ್ ಅಧ್ಯಕ್ಷತೆ ವಹಿಸಿದ್ದು, ಅವರೊಂದಿಗೆ ಐ. ಸಿ. ಚೆರಿಯನ್ ಅವರೂ ಬಹುದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಜನರಿಗೆ ಕಾನೂನು ಸಲಹೆ ನೀಡಿದರು.

ಸ್ಥಳೀಯ ಮುಖಂಡ ಶೌಕತ್ ಅಲಿ ಮಾತನಾಡಿದರು. ಸಮಿತಿಯ ಕಾರ್ಯದರ್ಶಿ ಪಿ. ಆರ್. ಶ್ರೀನಿವಾಸಮೂರ್ತಿ ಕಾನೂನು ನೆರವು ಪಡೆಯುವ ಬಗೆಯನ್ನು ವಿವರಿಸಿದರು.

ಜೀವವಿಮಾ ಶಾಖೆ ಕಛೇರಿ ಕಾರ್ಯಾರಂಭ

(1ನೇ ಪುಟದಿಂದ)

ರಾಮಚಂದ್ರರಾವ್‌ರವರನ್ನು ಪರಿಚಯಿಸಿದರು.

ಉಡುಪಿ ವಿಭಾಗದ ಮಾರ್ಕೆಟಿಂಗ್ ಮ್ಯಾನೇಜರ್ ಲಕ್ಷ್ಮಣನ್ ವಂದಿಸಿದರು.

ಆಯುರ್ವೇದ ಆಸ್ಪತ್ರೆಗೆ ಜಿಲ್ಲಾಧಿಕಾರಿ ಭೇಟಿ

ಈ ಕಾರ್ಯಕ್ರಮದ ನಂತರ ಜಿಲ್ಲಾಧಿಕಾರಿಗಳು ಇಲ್ಲಿ ಹೊಸದಾಗಿ ಆರಂಭವಾಗಿರುವ ಎ.ಎಲ್.ಎನ್. ರಾವ್ ಆಯುರ್ವೇದ ಕಾಲೇಜಿಗೆ ಭೇಟಿ ನೀಡಿದರು.

ರಮೇಶರಾವ್ ಅಧ್ಯಕ್ಷತೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಅನಿತಾ ವಿಧ್ಯಾ ಸಂಸ್ಥೆ ಕಾರ್ಯದರ್ಶಿ ಕುಶಲ ಶೆಟ್ಟಿ ಸ್ವಾಗತಿಸುತ್ತಾ, ಈ ವರ್ಷ ರಾಜ್ಯದಲ್ಲಿ ಆರಂಭವಾಗಿರುವ ಏಕೈಕ ಮೆಡಿಕಲ್ ಕಾಲೇಜು ಹಾಗೂ ಕುವೆಂಪು ವಿ. ವಿ.ಯ ಪ್ರಪ್ರಥಮ ಮೆಡಿಕಲ್ ಕಾಲೇಜು ತಮ್ಮದೆಂದರು. (ಶ್ರವಣಬೆಳಗೊಳಕ್ಕೆ ಮಂಜೂರಾದ ಆಯುರ್ವೇದ ಕಾಲೇಜು ಆರಂಭಗೊಂಡಿಲ್ಲ) ಕಾಲೇಜಿನ ಪ್ರಿನ್ಸಿಪಾಲ್ ಡಾ|| ಆನಂದ್ ವಿ. ಜೋಶಿ ವಂದಿಸಿದರು.

ಅರಣ್ಯ ರಕ್ಷಕರಿಂದ ಅರಣ್ಯ ಭಕ್ಷಣೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ತಾಲ್ಲೂಕಿನ ಅತಿ ಸಂಪದ್ಭರಿತ ಅರಣ್ಯ ಪ್ರದೇಶವಾದ ತುಂಗಾ-ಭದ್ರಾ ಸ್ಟೇಟ್ ಫಾರೆಸ್ಟ್‌ನ ಕೆರೆಕಟ್ಟೆಯಲ್ಲಿ ಅಲ್ಲಿನ ಫಾರೆಸ್ಟರ್ ಒಬ್ಬರು ಬೆಲೆಬಾಳುವ ಮರಗಳನ್ನು ಕಡಿದು ಅದರ ಕಟ್ಟಿಗೆಗಳನ್ನು ಶೃಂಗೇರಿ ಡಿಪೋಗೆ ತಂದು ವಿಲೇವಾರಿ ಮಾಡುತ್ತಿದ್ದು, ಆ ಕಟ್ಟಿಗೆಗೆ ಬಿಲ್ ಕೊಡುತ್ತಿರಲಿಲ್ಲವೆನ್ನಲಾಗಿದೆ. ಇಲಾಖೆಯಿಂದ ಶೃಂಗೇರಿ ಮಠದವರಿಗೆ ಈ ಕಟ್ಟಿಗೆ ನೀಡಲಾಗುತ್ತಿದೆ ಎಂದು ಸ್ಥಳೀಯರ್ಯಾರಾದರೂ ವಿಚಾರಿಸಿದರೆ ತಿಳಿಸುತ್ತಿದ್ದರಂತೆ.

ಸ್ಕ್ವಾಡ್‌ನವರ ಕೈಗೆ

ಇದೇ ರೀತಿ ಲಾರಿಯೊಂದಕ್ಕೆ ಕಟ್ಟಿಗೆ ತುಂಬುತ್ತಿದ್ದಾಗ ತನಿಖಾ ದಳದವರು ಬಂದು ವಿಚಾರಿಸಲಾಗಿ ಸತ್ಯ ಬಯಲಾಯಿತೆಂದೂ, ಇಲಾಖೆಯವರಾದ್ದರಿಂದ ಬಂದಷ್ಟು ದೈದು ಬಿಟ್ಟು ಹೋದರೆಂದೂ ತಿಳಿದು ಬಂದಿದೆ.

ಬರಗಾಲದಲ್ಲಿ ಕಾಡಾನೆ ಹಾವಳಿ !

ಬಾಳೆಹೊನ್ನೂರು ಬಳಿಯ ಬನ್ನೂರಿನ ಬಿ. ಮಂಜಪ್ಪ ಗೌಡರ, ನಾಟಿಯಾಗಿ ತೆನೆ ಬರುವ ಹಂತದಲ್ಲಿದ್ದ ಗದ್ದೆಗೆ ಸೆ. 22ರ ರಾತ್ರಿ 3 ಕಾಡಾನೆಗಳು ನುಗ್ಗಿ ಧ್ವಂಸ ಮಾಡಿದ್ದು, ಅರಣ್ಯ ರಕ್ಷಕರು ಈ ಕಾಡಾನೆಗಳನ್ನು ಊರಿನಿಂದ ಓಡಿಸಬೇಕೆಂದು ಬನ್ನೂರು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಶಿವಮೊಗ್ಗ ಅಡಿಕೆ ಧಾರಣೆ
ತಾ|| 10.10.1987
ಸರಕು : 3619 – 5089
ಬೆಟ್ಟೆ : 2369 – 3050
ಗೊರಬಲು : 800 – 1180

ಸಾಗರ ಅಡಿಕೆ ತಾ|| 10.10.1987
ಇಡಿ ಅಡಿಕೆ ರೂ. 2059–2221
ಚಾಲಿ ರೂ. 1361–1510
ಸಿಪ್ಪೆ ಗೋಟು ರೂ. 562–762
ಆಪಿ ರೂ. 3910 – 4440

ಮಂಗಳೂರು ಏಲಕ್ಕಿ ಧಾರಣೆ
ದಿನಾಂಕ 5-10-1987
ರೂ. 90 – 120

ಸಕಲೇಶಪುರ ಏಲಕ್ಕಿ ಧಾರಣೆ
ತಾ|| 9-10-1987
ಏಲಕ್ಕಿ ರೂ. 220 ರಿಂದ 230, ಜರಡಿ ರೂ. 180ರಿಂದ 190, ಉತ್ತಮ ರೂ. 140ರಿಂದ 150, ಕೊಳೆ ರೂ. 110ರಿಂದ 120, ಬೀಜ ರೂ. 110ರಿಂದ 120. ಕರಿಮೆಣಸು ರೂ. 55ರಿಂದ 60

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ವೀವಟಿಗ ಅಚ್ಚುಕೂಟ, ಕೊಪ್ಪ